1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

Civil Misc.485/2022

PW- 01

ಪ್ರ. ಬೋ. ದಿನಾಂಕಃ 11-10-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಯಶೋಧಮ್ಮ |
| ತಂದೆ/ಗಂಡನ ಹೆಸರು | : | ಎಸ್ ರಂಗಪ್ಪ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ದಾವಣಗೆರೆ |

ಈ ದಿನ ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣಪತ್ರದಲ್ಲರುವ ಸಹಿ ನನ್ನದಾಗಿ೯.

ಮುಂದುವರೆದ ಮುಖ್ಯ ವಿಚಾಣೆ - ಅರ್ಜಿದಾರರ ಪರ ಶ್ರೀ ಎಸ್.ಆರ್.ಎ.ವಕೀಲರಿಂದ.

ನನ್ನ ಜಮೀನಿನ ಮೂರು ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅವುಗಳನ್ನುನಿಪಿ.1 ರಿಂದ 3 ಗುರುತಿಸಲಾಯಿತು. ಅರಕೆರೆ ಗ್ರಾಮದ ಸಬ್ ರಿಜಿಸ್ಟರ್ ಮೌಲ್ಯ ಮಾಪನ ಪಟ್ಟಿ ಹಾಜರುಪಡಿಸಿದ್ದು, ಅದನ್ನು ನಿಪಿ. 4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ - ಎದುರುದಾರರ ಪರ ಶ್ರೀ ಎನ್ ಕೆ . ವಕೀಲರಿಂದ.

ನನ್ನದು ಮೊದಲು ಖುಶ್ಕಿ ಜಮೀನು ಆಗಿತ್ತು , ಈಗ ಅಡಿಕೆ ಬೆಳೆದಿದ್ದೇನೆ. ಸುಮಾರು 60 ವರ್ಷಗಳ ಹಿಂದೆಯೇ ವಿದ್ಯುತ್ ಲೈನ್ ಹಾಕಿದ್ದಾರೆ ಎನ್ನುವುದು ಸರಿ. ದಿ.22-09-2014 ರಂದು ದುರಸ್ತಿ ಕಾರ್ಯ ಮಾಡಿ ಒಂದು ಟವರ್ ಹಾಕಿ, ಚಾಲನೆ ನೀಡಿದ್ದಾರೆ ಎನ್ನುವುದು ಸರಿ. ಟವರ್ ಇರುವ ಜಮೀನು ಸರ್ವೆ ನಂಬರ್ ನಿಖರವಾಗಿ ಹೇಳಲು ಆಗುವುದಿಲ್ಲ. ವಿದ್ಯುತ್ ಲೈನ್ ಹಾಕುವಾಗ ನಾವು ಆಕ್ಷೇಪಣೆ ಮಾಡಿಲ್ಲ, ಕಾರಣ ಪರಿಹಾರ ಕೊಡುತ್ತೇವೆಂದು ಹೇಳಿದ್ದರು. ಹತ್ತು ಸಾವಿರ ಪರಿಹಾರ ಪಡೆದಿದ್ದೇನೆ. ಈ ಅರ್ಜಿಯನ್ನು ಕಾಲ ವಿಳಂಬ ಮಾಡಿ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ. ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎನ್ನುವುದು ಸರಿಯಲ್ಲ. ಪರಿಹಾರ ಬೇಕು ಎಂದು ಎದುರುದಾರರ ಇಲಾಖೆಗೆ ಅರ್ಜಿ ಸಲ್ಲಿಸಿಲ್ಲ. ನನ್ನ ಜಮೀನಿನಲ್ಲಿ ವಿದ್ಯುತ್ ಲೈನ್ ಎಳೆದಿರುವ

ಬಗ್ಗೆ ಕಂಬ ಹಾಕಿರುವ ಬಗ್ಗೆ ಯಾವುದೇ ಸರ್ವೆ ಮಾಡಿಸಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಪಹಣಿಯಲ್ಲಿ ನಮೂದು ಮಾಡಿರುವ ಬೆಳೆ ಸತ್ಯವಾಗಿರುತ್ತದೆ. ವಿದ್ಯುತ್ ಲೈನ್ ನಿಂದ ಸುಮಾರು 100 ಅಡಿ ದೂರದಲ್ಲಿ ಬೋರ್ ವೆಲ್ ಇದೆ, ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಬೋರ್ ವೆಲ್ ಇರುವ ಜಮೀನಿನ ಸರ್ವೆ ನಂಬರ್ ನಿಖರವಾಗಿ ಹೇಳಲು ಆಗುವುದಿಲ್ಲ. ಪರಿಹಾರ ನೀಡುವಂತೆ ಎದುರುದಾರರಿಗೆ ಲಿಖಿತ ಅರ್ಜಿ ನೀಡಿಲ್ಲ. ಪಣಿಹಿಯಲ್ಲಿ ಬೆಳೆದಿರುವ ಬೆಳೆಗಳು ಸರಿಯಾಗಿರುತ್ತವೆ. ಅದು ನಿಜವಾಗಿರುತ್ತದೆ . ಅಡಿಕೆ ಬೆಳೆಯನ್ನು ಇಲ್ಲಿಗೆ 23 ವರ್ಷಗಳಿಂದ ಬೆಳೆಯುತ್ತಿದ್ದೇನೆ. ಅಡಿಕೆ ಬೆಳೆಯನ್ನು ಕಾನೂನು ಬಾಹಿರವಾಗಿ ವಿದ್ಯುತ ಲೈನ್ ಕೆಳಗೆ ಬೆಳೆದಿದ್ದೇನೆ ಎನ್ನುವುದು ಸರಿಯಲ್ಲ. ದುರಸ್ತಿ ಕಾರ್ಯ ಮಾಡಿರುವುದರಿಂದ ನಮಗೆ ಯಾವುದೇ ನಷ್ಟವಾಗಿಲ್ಲ ಎನ್ನುವುದು ಸರಿಯಲ್ಲ. ಅಡಿಕೆ ಬೆಳೆ ಬೆಳೆದಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ದಾಖಲೆ ಪಡೆದು ಹಾಜರುಪಡಿಸಿಲ್ಲ. ಬೆಳೆ ನಷ್ಟವಾಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಭೂಮಿಯ ಮೌಲ್ಯ ಎಕರೆಗೆ 20 ಲಕ್ಷ ಕಡಿಮೆಯಾಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಅಡಿಕೆ ಬೆಳೆಯಿಂದ ನನಗೆ ಯಾವುದೇ ನಷ್ಟವಾಗಿಲ್ಲ. ಒಟ್ಟು ರೂ.11,00,000/- ನಷ್ಟವಾಗಿದೆ ಎಂದು ತೋರಿಸಲು ನೋಂದಣಿ ದಾಖಲೆ ಹಾಜರುಪಡಿಸಿಲ್ಲ. ನನ್ನ ಜಮೀನನಲ್ಲಿ ಲೈನ್ ಎಳೆಯಲಾಗಿದೆ, ಕಂಬ ಹಾಕಲಾಗಿದೆ ಎಂದು ತೋರಿಸಲು ಫೋಟೋವಾಗಲಿ, ಯಾವುದೇ ದಾಖಲೆಯಾಗಲಿ ಹಾಜರುಪಡಿಸಿರುವುದಿಲ್ಲ. ಲೈನ್ ಕೆಳಗಡೆ ಮೆಕ್ಕೆ ಜೋಳ ಬೆಳೆಯಲು ತೊಂದರೆ ಇಲ್ಲ ಎನ್ನುವುದು ಸರಿ. ಎಷ್ಟು ವಿಸ್ತೀರ್ಣದಲ್ಲಿ ವಿದ್ಯುತ್ ತಂತಿ ಹಾಕಲಾಗಿದೆ ಎನ್ನುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ದಾಖಲೆ ಪಡೆದಿಲ್ಲ. ಆ ರೀತಿ ದಾಖಲೆ ಹಾಜರುಪಡಿಸಿಲ್ಲ. ವಿದ್ಯುತ್ ಲೈನ್ ಹಾಕಿರುವುದರಿಂದ ನನಗೆ ಅನುಕೂಲವಾಗಿದೆ ಎನ್ನುವುದು ಸರಿಯಲ್ಲ. ಸಬ್ ರಜಿಸ್ಟರ್ ಕಛೇರಿಯಿಂದ ಭೂಮಿ ಮೌಲ್ಯದ ನಷ್ಟದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಪರಿಹಾರ ಪಡೆಯುವ ದುರುದ್ದೇಶದಿಂದ ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.